

## ಬಾರಕೂರಿನ ಚರಕ ಇದು

ಅನಾದಿ ಕಾಲದಲ್ಲಿ ನಮ್ಮ ಪೂರ್ವಜರೆನಿಸಿಕೊಂಡವರು ಯಾವುದೇ ರೀತಿಯ ಬಟ್ಟೆಯನ್ನು ತೊಡುತ್ತಿರಲಿಲ್ಲ. ಕಾಲ ಬದಲಾದಂತೆ ಮೈ ಮುಚ್ಚಿಕೊಳ್ಳಲು ಮರದ ತೊಗಟೆ, ಸೊಪ್ಪು, ಪ್ರಾಣಿಗಳ ಚರ್ಮ ಮುಂತಾದವುಗಳನ್ನು ಬಳಸಲಾರಂಭಿಸಿದರು. ಕ್ರಮೇಣ ಬಟ್ಟೆಯನ್ನು ತೊಡಲಾರಂಭಿಸಿದರು. ಈ ಬಟ್ಟೆಯನ್ನು ಕೈಮಗ್ಗ, ಚರಕ ಮುಂತಾದವುಗಳಿಂದ ನೂಲನ್ನು ತೆಗೆದು ತಯಾರಿಸುತ್ತಿದ್ದರು. ಗಾಂಧೀಜಿಯವರು ಕೂಡಾ ಚರಕದಿಂದ ನೂಲನ್ನು ತೆಗೆಯುತ್ತಿದ್ದರೆಂದು ನಾವು ಕೇಳಿ ತಿಳಿದಿದ್ದೇವೆ.

ಅಂತಹ ಒಂದು ಚರಕ ಇಲ್ಲಿದೆ. ಇದು ಸ್ವಾತಂತ್ರ್ಯ ಪೂರ್ವದ ಚರಕ. ಇದರಿಂದ ನೂಲನ್ನು ತೆಗೆದು ಬಟ್ಟೆ ತಯಾರಿಸುತ್ತಿದ್ದರು. ಇದು ಇಂದಿಗೂ ಸುಸ್ಥಿತಿಯಲ್ಲಿದೆ. ಇದು ಈಗ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಬಾರಕೂರಿನ ಮಸ್ಕಿಬೈಲು ರಾಘವೇಂದ್ರ ರಾಯರ ಮನೆಯಲ್ಲಿದ್ದು ಇದನ್ನು ಬಹಳ ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ.

—ಎಂ. ಗಣೇಶ ರಾವ್, ಬಾರಕೂರು



## ಅಂತರಗಂಗೆ

ಕೋಲಾರ ನಗರದ ಪಶ್ಚಿಮಕ್ಕೆ ಮೂರು ಕಿ.ಮೀ. ದೂರದಲ್ಲಿ ಶತಶೃಂಗ ಪರ್ವತ ಶ್ರೇಣಿಯಲ್ಲಿರುವ ಅಂತರಗಂಗೆ ಚೆಲುವಿನ ಚಿತ್ತಾರವಾಗಿದೆ. ಇಲ್ಲಿರುವ ಬಸವಣ್ಣನ ಬಾಯಿಂದ ಬೀಳುವ ಜಲಧಾರೆ ವಿಜ್ಞಾನ ವಿಸ್ಮಯವಾಗಿದೆ. ಭೂಮಿಯ ಅಂತರಾಳದಿಂದ ಹೊರಹೊಮ್ಮುವ ನೀರು ವಿಜ್ಞಾನಿಗಳಿಗೊಂದು ಸವಾಲಾಗಿದೆ. ಹಾಗಾಗಿಯೇ ಇದಕ್ಕೆ ಅಂತರಗಂಗೆ ಎಂದು ಹೆಸರು ಬರಲು ಕಾರಣ. ಶೃಂಗದ ಬೆಟ್ಟಗುಡ್ಡ ಬಂಡೆಗಳು ಹಲವು ಆಕಾರಗಳನ್ನು ಪಡೆದಿದ್ದು ಶಿಖರದಲ್ಲಿರುವ ಹಾವಿನಹೆಡೆ ಆಕಾರದ ಬಂಡೆಯಿಂದ ಏಳು ಹಳ್ಳಿಗಳ ಪಕ್ಷಿನೋಟ ಕಾಣಬಹುದಾಗಿದೆ. ಚಾರಣಪ್ರಿಯರ ಸ್ವರ್ಗವಾಗಿರುವ ಈ ತಾಣ ದಕ್ಷಿಣ ಕಾಶಿಯೆಂದೇ ಪ್ರಸಿದ್ಧಿಯಾಗಿದ್ದು, ಇಲ್ಲಿ ವಿಶ್ವನಾಥನ ಮಂದಿರವಿದೆ.

—ಮನೀಷಾ ಪಾಟೀಲ, ವಿಜಯಪುರ

## ನೀವೂ ಬರೆಯಿರಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.

**ಇಮೇಲ್ ವಿಳಾಸ**

editorsu@sudha.co.in

**ಕಚೇರಿ ವಿಳಾಸ:** ನಿಮ್ಮ ಪುಟ ವಿಭಾಗ, ಸಂಪಾದಕರು, 'ಸುಧಾ' ವಾರ ಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 560001